ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿರುವ ರಸ್ತೆಗಳ ಕಾಮಗಾರಿ ಅನುಷ್ಠಾನಕ್ಕಾಗಿ 2007–08ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ :

1. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ರವರು ಪತ್ರ ಸಂಖ್ಯೆ: ಡಿಎಸ್‌ಕೆ/ಡಿಇವಿ/ರಕರ/ಆಧಾರ/ 13/2007 ದಿನಾಂಕ:09.04.07 ಡಿಎಸ್‌ಕೆ/ಡಿ.ಇ.ವಿ/ರ.ಕರ/ ಅ.ದಾನ/1/ 2006–07 ದಿನಾಂಕ: 29.05.07.
2. ಆರ್ಥಿಕ ಇಲಾಖೆ (ಲೋ.ಇ.ಆರ್ಥಿಕ ಕೋಶ) ರವರ ಪತ್ರ ಸಂಖ್ಯೆ:ಲೋಇ/275/ಆಕೋ–1/07 ದಿನಾಂಕ: 24.04.07.

******

ಪ್ರಸ್ತಾವನೆ :–

ರಾಜ್ಯದ ಈ ಕೆಳಕಂಡ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿರುವ ರಸ್ತೆಗಳ ಕಾಮಗಾರಿಗಳ ಅನುಷ್ಠಾನಕ್ಕಾಗಿ 2007–08ನೇ ಸಾಲಿನಲ್ಲಿ ಒದಗಿಸ ಲಾಗಿರುವ ರೂ. 160.00 ಲಕ್ಷಗಳಲ್ಲಿ ರೂ. 158.13 ಲಕ್ಷಗಳನ್ನು ಬಿಡುಗಡೆ ಗೊಳಿಸಲು ಸಕ್ಕರೆ ನಿರ್ದೇಶಕರು ಮೇಲೆ ಓದಲಾದ (1)ರ ದಿನಾಂಕ: 09.04.07 ಮತ್ತು 29.05.07ರ ಪತ್ರಗಳಲ್ಲಿ ಪ್ರಸ್ತಾಪಿಸಿದ್ದಾರೆ.

ಕ್ರ. ಸಂ.	ಕಾರ್ಖಾನೆ ಹೆಸರು	ವರ್ಷ	ಮೊತ್ತ
1	ಗೋದಾವರಿ ಶುಗರ್ಸ್ (ಲಿ), ಸಮೀರವಾಡಿ	1998–1999	12.00
2	ಗೋದಾವರಿ ಶುಗರ್ಸ್ (ಲಿ), ಸಮೀರವಾಡಿ	1999–2000	48.46
3	ಐ.ಎಸ್.ಆರ್. ಶುಗರ್ಸ್ (ಲಿ), ಹೊಸಪೇಟೆ	2000–2001	14.18
4	ಶ್ಯಾಮನೂರು ಶುಗರ್ಸ್ (ಲಿ), ದುಗ್ಗಾವತಿ	2000–2001	21.28

5	ಗೋದಾವರಿ ಶುಗರ್ಸ್ (ಲಿ), ಸಮೀರವಾಡಿ	2001–2002	10.20
6	ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ (ನಿ), ಶ್ರೀನಿವಾಸಪುರ	2002–2003	12.45
7	ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ (ನಿ), ಶ್ರೀನಿವಾಸಪುರ	2003–2004	8.17
8	ಕರ್ನಾಟಕ ಸಹಕಾರ ಸಕ್ಕರೆ ಕಾರ್ಖಾನೆ (ನಿ), ಹಾವೇರಿ	1998–1999	23.70
9	ಕರ್ನಾಟಕ ಸಹಕಾರ ಸಕ್ಕರೆ ಕಾರ್ಖಾನೆ (ನಿ), ಹಾವೇರಿ	2002–2003	5.01
10	ಕರ್ನಾಟಕ ಸಹಕಾರ ಸಕ್ಕರೆ ಕಾರ್ಖಾನೆ (ನಿ), ಹಾವೇರಿ	2003–2004	2.68
	ಒಟ್ಟು		**158.13**

ಮುಂದುವರಿದು, ಈ ಹಣವು 1988–99 ರಿಂದ 2002–03ನೇ ಸಾಲಿನಲ್ಲಿ ರಸ್ತೆ ಕರದಿಂದ ಸಂಗ್ರಹವಾಗಿದೆ. 1998–99 ರಿಂದ 2003–04ರ ಸಾಲಿನವರೆಗೆ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ರೂ.933.62 ಲಕ್ಷ ಬಿಡುಗಡೆಗೆ ಬಾಕಿ ಇದ್ದು, 2004–05 ಮತ್ತು 2005–06ನೇ ಸಾಲಿನಲ್ಲಿ ಕ್ರಮವಾಗಿ ರೂ. 569.41 ಲಕ್ಷ ಮತ್ತು ರೂ. 865.18 ಲಕ್ಷಗಳು ಸಂಗ್ರಹವಾಗಿದೆ. ಸದರಿ ಹಣ ಬಿಡುಗಡೆಗೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು, ಆರ್ಥಿಕ ಇಲಾಖೆ (ವೆಚ್ಚ–1) ಇವರೊಂದಿಗೆ ಈ ಕುರಿತು ನಿರ್ವಹಿಸುವಂತೆ, 24.04.07ರ ಪತ್ರದಲ್ಲಿ ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ) ರವರು ಸಕ್ಕರೆ ನಿದೇಶಕ ರವರಿಗೆ ಮೇಲೆ ಓದಲಾದ (2)ರ ದಿನಾಂಕ: 24.04.07ರ ಪತ್ರದಲ್ಲಿ ತಿಳಿಸಿರುತ್ತಾರೆ.

ಅದರಂತೆ 2007–08ನೇ ಸಾಲಿಗೆ ಈ ಉದ್ದೇಶಕ್ಕಾಗಿ 160 ಲಕ್ಷ ರೂ.ಗಳ ಅನುದಾನವನ್ನು ಇಲಾಖೆಯ ಲೆಕ್ಕ ಶೀರ್ಷಿಕೆ 4860–04–800–0–01–172ರ ಅಡಿಯಲ್ಲಿ ಒದಗಿಸಲಾಗಿದೆ. ಸದರಿ ಹಣದಲ್ಲಿ 158.13 ಲಕ್ಷ ರೂ.ಗಳ ಬಿಡುಗಡೆಗೆ ಆಯುಕ್ತರು ಕಬ್ಬು ಅಭಿವೃದ್ಧಿರವರು ಉಲ್ಲೇಖಿತ(1) ರಲ್ಲಿನ ಪತ್ರಗಳಲ್ಲಿ ಕೋರಿರುತ್ತಾರೆ.

ಆಯುಕ್ತರು ಕಬ್ಬು ಅಭಿವೃದ್ಧಿ ರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 164 ಎಸ್‌ಜಿಎಫ್ 07 ಬೆಂಗಳೂರು, ದಿನಾಂಕ: 20.06.2007

ಆಯುಕ್ತರು ಕಬ್ಬು ಅಭಿವೃದ್ಧಿರವರು ಪ್ರಸ್ತಾವನೆಯಲ್ಲಿ ಕೋರಿರುವಂತೆ ರಾಜ್ಯದ ಈ ಕೆಳಕಂಡ 10 ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಕ್ರಿಯಾ ಯೋಜನೆ ಯನ್ನು ಕಾರ್ಯಗತ ಗೊಳಿಸಲು 2007–08ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 4860–04–800–0–01–172ರಡಿ ಒದಗಿಸಲಾಗಿರುವ 160.00 ಲಕ್ಷ ರೂ.ಗಳ ಅನುದಾನದಲ್ಲಿ ಅಧಿಕೃತ ಜ್ಞಾಪನಾ ಸಂಖ್ಯೆ: ಎಫ್‌ಡಿ 7 ಬಿಪಿಇ 07 ದಿನಾಂಕ: 30.03.07 ರನ್ವಯ ಆಯವ್ಯಯವನ್ನು 4 ತಿಂಗಳಿಗೆ ಅನುಮೋದನೆ ನೀಡಲಾಗಿರುವುದರಿಂದ 1/3 ಭಾಗದಷ್ಟು ಅಂದರೆ 53 ಲಕ್ಷ ರೂ.ಗಳನ್ನು (ಐವತ್ತು ಮೂರು ಲಕ್ಷ ರೂ.ಗಳು ಮಾತ್ರ) ಈ ಕೆಳಕಂಡ ರಸ್ತೆ ಕಾಮಗಾರಿಗಳಿಗೆ ಅದ್ಯತೆ ಮೇರೆಗೆ ಬಿಡುಗಡೆ ಮಾಡುವ ಸಲುವಾಗಿ ಆಯುಕ್ತರು ಕಬ್ಬು ಅಭಿವೃದ್ಧಿ ರವರಿಗೆ ಬಿಡುಗಡೆ ಮಾಡಲಾಗಿದೆ.

ಕ್ರ. ಸಂ.	ಕಾರ್ಖಾನೆಯ ಹೆಸರು	ಸಂಗ್ರಹಿಸಲಾದ ವರ್ಷ	ಬಿಡುಗಡೆ ಮೊತ್ತ
1	ಗೋದಾವರಿ ಶುಗರ್ಸ್ (ಲಿ), ಸಮೀರವಾಡಿ	1998–1999	12.00
2	ಗೋದಾವರಿ ಶುಗರ್ಸ್ (ಲಿ), ಸಮೀರವಾಡಿ	1999–2000	48.46
3	ಐ.ಎಸ್.ಆರ್. ಶುಗರ್ಸ್ (ಲಿ), ಹೊಸಪೇಟೆ	2000–2001	14.18
4	ಶ್ಯಾಮನೂರು ಶುಗರ್ಸ್ (ಲಿ), ದುಗ್ಗಾವತಿ	2000–2001	21.28
5	ಗೋದಾವರಿ ಶುಗರ್ಸ್ (ಲಿ), ಸಮೀರವಾಡಿ	2001–2002	10.20
6	ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ (ನಿ), ಶ್ರೀನಿವಾಸಪುರ	2002–2003	12.45

7	ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ (ನಿ), ಶ್ರೀನಿವಾಸಪುರ	2003–2004	8.17
8	ಕರ್ನಾಟಕ ಸಹಕಾರ ಸಕ್ಕರೆ ಕಾರ್ಖಾನೆ (ನಿ), ಹಾವೇರಿ	1998–1999	23.70
9	ಕರ್ನಾಟಕ ಸಹಕಾರ ಸಕ್ಕರೆ ಕಾರ್ಖಾನೆ (ನಿ), ಹಾವೇರಿ	2002–2003	5.01
10	ಕರ್ನಾಟಕ ಸಹಕಾರ ಸಕ್ಕರೆ ಕಾರ್ಖಾನೆ (ನಿ), ಹಾವೇರಿ	2003–2004	2.68
	ಒಟ್ಟು		**158.13**

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ 21 ಟಿ.ಎಫ್.ಪಿ 2006 ದಿನಾಂಕ: 02.09.06ರಲ್ಲಿ ಸರ್ಕಾರದ ಆಡಳಿತ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಪಿ.ಆನಂದ್ ಕುಮಾರ್
ಪೀಠಾಧಿಕಾರಿ (ಸಕ್ಕರೆ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.